ಕ್ರಮ ಸಂಖ್ಯೆ: 7

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನಾಲ್ಕನೇ ಅಧಿವೇಶನ**

# ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-25)**

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ನ್ನು (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಶೀರ್ಷಿಕೆ, ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯ ತಿದ್ದುಪಡಿ.-** ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ರಲ್ಲಿ (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ).-

(i) ಶೀರ್ಷಿಕೆಯಲ್ಲಿ, "ತರಬೇತಿ" ಎಂಬ ಪದವನ್ನು ಬಿಟ್ಟು ಬಿಡತಕ್ಕದ್ದು; ಮತ್ತು

(ii) ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯಲ್ಲಿ "ಕಡ್ಡಾಯ ಸೇವಾ ತರಬೇತಿಗಾಗಿ" ಎಂಬ ಪದಗಳಿಗೆ "ಕಡ್ಡಾಯ ಸೇವೆಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪದಾವಳಿಯನ್ನು ಬಿಟ್ಟುಬಿಡುವುದು.**– ಮೂಲ ಅಧಿನಿಯಮದಲ್ಲಿ, "ತರಬೇತಿ" ಎಂಬ ಪದವನ್ನು, 3ನೇ ಪ್ರಕರಣದ (4)ನೇ ಉಪಪ್ರಕರಣದ ಪರಂತುಕವನ್ನು ಹೊರತುಪಡಿಸಿ, ಎಲ್ಲೆಲ್ಲಿ ಬರುವುದೋ ಅಲ್ಲಲ್ಲಿ ಅದರ ಪ್ರತ್ಯಯದೊಂದಿಗೆ ಬಿಟ್ಟುಬಿಡತಕ್ಕದ್ದು.

**4. 3ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, "ಕಿರಿಯ ನಿವಾಸಿ ತರಬೇತಿ ಪಡೆಯುವವನು (ಜೂನಿಯರ್ ರೆಸಿಡೆಂಟ್ ಟ್ರೈನಿ)" ಎಂಬ ಪದಗಳಿಗೆ "ಕಿರಿಯ ನಿವಾಸಿ (ಜೂನಿಯರ್ ರೆಸಿಡೆಂಟ್)" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(iii) (4)ನೇ ಉಪಪ್ರಕರಣದಲ್ಲಿನ ಪರಂತುಕದಲ್ಲಿ "ತರಬೇತಿ" ಎಂಬ ಪದ ಬರುವ ಎರಡು ಕಡೆಗಳಲ್ಲಿ "ಸೇವೆ" ಎಂಬ ಪದವನ್ನು ಅದರ ಪ್ರತ್ಯಯದೊಂದಿಗೆ ಪ್ರತಿಯೋಜಿಸತಕ್ಕದ್ದು.

**5. 4ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, "ಹಿರಿಯ ನಿವಾಸಿ ತರಬೇತಿ ಪಡೆಯುವವನು (ಸೀನಿಯರ್ ರೆಸಿಡೆಂಟ್ ಟ್ರೈನಿ)" ಎಂಬ ಪದಗಳಿಗೆ "ಹಿರಿಯ ನಿವಾಸಿ (ಸೀನಿಯರ್ ರೆಸಿಡೆಂಟ್)" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) 3ನೇ ಪ್ರಕರಣದ(4)ನೇ ಉಪ–ಪ್ರಕರಣದಲ್ಲಿನ ಉಪಬಂಧಗಳು, ಈ ಪ್ರಕರಣದ ಅಡಿಯಲ್ಲಿ ಸ್ನಾತಕೋತ್ತರ ಪದವೀಧರರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು:

ಪರಂತು, ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧವನ್ನು ಸೂಚಿಸಲು ಕಡ್ಡಾಯ ಗ್ರಾಮೀಣ ಸೇವೆಗೆ ಒಳಗಾಗುವ ಅಂಥ ಅಭ್ಯರ್ಥಿಗಳಿಗೆ, ಅಂಥ ಸೇವೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೋಂದಣಿಯನ್ನು ನೀಡಬಹುದು;"

6. **5ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) 3ನೇ ಪ್ರಕರಣದ (4)ನೇ ಉಪಪ್ರಕರಣದ ಉಪಬಂಧಗಳು ಸೂಪರ್ ಸ್ಪೆಶಾಲಿಟಿ ಕೋರ್ಸುಗಳನ್ನು ತೇರ್ಗಡೆಯಾಗುವ ಅಭ್ಯರ್ಥಿಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು;

ಪರಂತು, ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧವನ್ನು ಸೂಚಿಸಲು ಕಡ್ಡಾಯ ಗ್ರಾಮೀಣ ಸೇವೆಗೆ ಒಳಗಾಗುವ ಅಂಥ ಅಭ್ಯರ್ಥಿಗಳಿಗೆ ಅಂಥ ಸೇವೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೊಂದಣಿಯನ್ನು ನೀಡಬಹುದು."

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012ಕ್ಕೆ (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26),-

(1) ಖಾಯಂ ನೋಂದಣಿಯನ್ನು ನೀಡುವ ಮೊದಲು ವೈದ್ಯಕೀಯ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ತರುವಾಯ, ತರಬೇತಿಯ ಪರಿಕಲ್ಪನೆಯನ್ನು ಬಿಟ್ಟು, ಕಡ್ಡಾಯ ಗ್ರಾಮೀಣ ಸೇವೆಯನ್ನು ಮಾತ್ರ ಉಳಿಸಿಕೊಳ್ಳಲು;

(2) ಗ್ರಾಮೀಣ ಸೇವೆಗೆ ಒಳಗಾಗದಿರುವ ಅಂಥ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಪದವಿ ಪ್ರದಾನ ಮಾಡುವುದರ ಮೇಲಿನ ನಿರ್ಬಂಧಕಾಜ್ಞೆಯನ್ನು ಹಿಂತೆಗೆದುಕೊಳ್ಳಲು,

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಆದುದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಾ. ಶರಣಪ್ರಕಾಶ ಆರ್. ಪಾಟೀಲ್**
ವೈದ್ಯಕೀಯ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 26) ಉದ್ಧೃತ ಭಾಗ**

Xx xx xx

**ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012**

ಪದವಿಗಳು ಅಥವಾ ಸ್ನಾತಕೋತ್ತರ ಪದವಿಗಳು ಅಥವಾ ಡಿಪ್ಲೋಮೊಗಳನ್ನು ಪ್ರದಾನ ಮಾಡುವುದಕ್ಕೆ ಮೊದಲು ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಪದವಿಗಳು ಅಥವಾ ಸ್ನಾತಕೋತ್ತರ ಪದವಿಗಳು ಅಥವಾ ಡಿಪ್ಲೋಮೊಗಳನ್ನು ಪ್ರದಾನ ಮಾಡುವುದಕ್ಕೆ ಮೊದಲು ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ :-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ 2012 ಎಂದು ಕರೆಯತಕ್ಕದ್ದು.

Xxx xxx xxx

**3. ವೈದ್ಯಕೀಯ ಕೋರ್ಸನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವೆ.**- (1) ಎಂಬಿಬಿಎಸ್ ಪದವಿ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮತ್ತು ಒಂದು ವರ್ಷದ ಇಂಟರ್ನ್‌ಶಿಪ್ ಪೂರ್ಣಗೊಳಿಸಿದ ತರುವಾಯ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಕೌನ್ಸಿಲಿಂಗ್‌ನ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಹಂಚಿಕೆಯಾದ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಡತಕ್ಕದ್ದು. ಅಂಥ ಸೇವಾ ಅವಧಿಯಲ್ಲಿ ಆತನನ್ನು ಕಿರಿಯ ನಿವಾಸಿ ತರಬೇತಿ ಪಡೆಯುವವನು (ಜೂನಿಯರ್ ರೆಸಿಡೆಂಟ್ ಟ್ರೈನಿ) ಎಂದು ಕರೆಯತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಯನ್ನು ಹೊಂದಲು ಅಗತ್ಯಪಡಿಸಲಾಗಿದ್ದು ಆದರೆ ತರಬೇತಿಗೆ ಒಳಪಡದ ಅಂಥ ಅಭ್ಯರ್ಥಿಗೆ ಯಾವುದೇ ವಿಶ್ವವಿದ್ಯಾಲಯವು ಪದವಿಯನ್ನು ಪ್ರದಾನ ಮಾಡತಕ್ಕದ್ದಲ್ಲ:

ಪರಂತು, ಯಾವುದೇ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮೊ ಕೋರ್ಸನ್ನು ಮಾಡಲು ಆಯ್ಕೆಯಾದ ಮತ್ತು ಮುಂದುವರೆಸುತ್ತಿರುವ ಅಭ್ಯರ್ಥಿಗಳ ಸಂದರ್ಭದಲ್ಲಿ, ಅಂಥ ಕೋರ್ಸು ಪೂರ್ಣಗೊಂಡ ನಿಕಟ ತರುವಾಯ

ಒಂದು ವರ್ಷದ ಕಡ್ಡಾಯ ಸೇವೆಗೆ ಒಳಗಾಗಬಹುದು ಮತ್ತು ಅಂಥ ಅಭ್ಯರ್ಥಿಗೆ, ಸ್ನಾತಕೋತ್ತರ ಪದವಿಯನ್ನು ಮುಂದುವರೆಸುವ ಉದ್ದೇಶಕ್ಕೆ ಸಿಂಧುವಾಗುವಂತೆ, ತಾತ್ಕಾಲಿಕ ಎಂಬಿಬಿಎಸ್ ಪ್ರಮಾಣಪತ್ರವನ್ನು ನೀಡಬಹುದು.

(3) ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಗೆ ಒಳಪಟ್ಟ ಪ್ರತಿಯೊಬ್ಬ ಅಭ್ಯರ್ಥಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಲ್ಲಿ ಸಾಮಾನ್ಯ ಕರ್ತವ್ಯ ನಿರತ ವೈದ್ಯರ ಒಟ್ಟು ಕನಿಷ್ಠ ಸಂಬಳಕ್ಕಿಂತ ನೂರು ರೂಪಾಯಿಗಳಷ್ಟು ಕಡಿಮೆಗೆ ಸಮನಾಗಿರುವ ಅಂಥ ವೃತ್ತಿ ವೇತನವನ್ನು (ಸ್ಟೈಫಂಡ್) ಸಂದಾಯ ಮಾಡತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ ಪ್ರಕರಣದಲ್ಲಿ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಗೆ ಒಳಪಡದಿರುವಂಥ ಪ್ರತಿಯೊಬ್ಬ ಅಭ್ಯರ್ಥಿಯು, ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರಡಿಯಲ್ಲಿ ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 ರಡಿಯಲ್ಲಿ ರಾಜ್ಯದಲ್ಲಿ ಶಾಶ್ವತ ನೋಂದಣಿಗೆ ಅರ್ಹರಾಗಿರತಕ್ಕದ್ದಲ್ಲ:

ಪರಂತು, ಅಂಥ ಅಭ್ಯರ್ಥಿಗಳಿಗೆ, ಸೇವೆಯ ಅವಧಿಯಲ್ಲಿ ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧಿಗಳನ್ನು ನಿಯಮಿಸಲು ಸದರಿ ಸೇವೆಗೆ ಒಳಪಡುವವರೆಗೆ, ತಾತ್ಕಾಲಿಕ ನೋಂದಣಿಯನ್ನು ನೀಡಬಹುದಾಗಿದೆ.

**4. ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ.–** (1) 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವಾ ತರಬೇತಿಗೆ ಒಳಪಡಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಸ್ನಾತಕೋತ್ತರ ಡಿಪ್ಲೋಮೊ ಅಥವಾ ಪದವಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದಂಥ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ರಾಜ್ಯದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಮತ್ತು ಸ್ಥಳ ನಿಯುಕ್ತಿಯಾದ ನಗರ ಪ್ರದೇಶದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಕಡ್ಡಾಯ ಸೇವಾ ತರಬೇತಿಗೆ ಒಳಪಡತಕ್ಕದ್ದು. ಅಂಥ ಸೇವಾ ಅವಧಿಯಲ್ಲಿ ಆತನನ್ನು ಹಿರಿಯ ನಿವಾಸಿ ತರಬೇತಿ ಪಡೆಯುವವನು (ಸೀನಿಯರ್ ರೆಸಿಡೆಂಟ್ ಟ್ರೈನಿ) ಎಂದು ಕರೆಯತಕ್ಕದ್ದು. ಆತನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಶೇಷತಜ್ಞರ ಒಟ್ಟು ಕನಿಷ್ಠ ಸಂಬಳಕ್ಕಿಂತ ನೂರು ರೂಪಾಯಿಗಳಷ್ಟು ಕಡಿಮೆಗೆ ಸಮನಾಗಿರುವ ನಿಯಮಿಸಬಹುದಾದ ಅಂಥ ವೃತ್ತಿ ವೇತನಕ್ಕೆ ಅರ್ಹನಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಮತ್ತು ನಿಯಮಿಸಲಾದಂತೆ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಹಂಚಿಕೆಯಾದ ಅಥವಾ ಸ್ಥಳನಿಯುಕ್ತಿಯಾದ ಸರ್ಕಾರಿ ಆಸ್ಪತ್ರೆಯಲ್ಲಿ ಕಡ್ಡಾಯ ಸೇವಾ ತರಬೇತಿಯಲ್ಲಿ ಸೇರಿಕೊಳ್ಳದಂಥ ಮತ್ತು ಒಳಪಡದ ಅಂಥ ಅಭ್ಯರ್ಥಿಗಳಿಗೆ ಯಾವುದೇ ವಿಶ್ವವಿದ್ಯಾಲಯವು, ರಾಜ್ಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮೊವನ್ನು ಪ್ರದಾನಮಾಡತಕ್ಕದ್ದಲ್ಲ:

ಪರಂತು, ಸೂಪರ್ ಸ್ಪೆಷಾಲಿಟಿ ಕೋರ್ಸನ್ನು ಮಾಡಲು ಆಯ್ಕೆಯಾದ ಮತ್ತು ಮುಂದುವರೆಸುತ್ತಿರುವ ಅಭ್ಯರ್ಥಿಗಳ ಸಂದರ್ಭದಲ್ಲಿ, ಅಂಥ ಕೋರ್ಸು ಪೂರ್ಣಗೊಂಡ ನಿಕಟ ತರುವಾಯ ಒಂದು ವರ್ಷದ ಕಡ್ಡಾಯ ಸೇವೆಗೆ ಒಳಗಾಗಬಹುದು ಮತ್ತು ಅಂಥ ಅಭ್ಯರ್ಥಿಗಳಿಗೆ ಸೂಪರ್ ಸ್ಪೆಷಾಲಿಟಿ ಕೋರ್ಸನ್ನು ನಡೆಸುವ ಉದ್ದೇಶಕ್ಕಾಗಿ ಮಾತ್ರವೇ ಸಿಂಧುವಾಗುವಂತೆ ತಾತ್ಕಾಲಿಕ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಪದವಿ ಪ್ರಮಾಣಪತ್ರಗಳನ್ನು ನೀಡಬಹುದು:

ಮತ್ತು ಪರಂತು, ಅಂಥ ಅಭ್ಯರ್ಥಿಗಳಿಗೆ, ತರಬೇತಿಯ ಅವಧಿಯಲ್ಲಿ ರೋಗಿಗಳಿಗೆ ಸ್ವತಂತ್ರವಾಗಿ ಚಿಕಿತ್ಸೆ ನೀಡಲು ಮತ್ತು ಔಷಧಿಗಳನ್ನು ನಿಯಮಿಸಲು ಸದರಿ ತರಬೇತಿಗೆ ಒಳಪಡುವವರೆಗೆ, ತಾತ್ಕಾಲಿಕ ನೋಂದಣಿಯನ್ನು ನೀಡಬಹುದಾಗಿದೆ.

**5. ಸೂಪರ್‌ಸ್ಪೆಷಾಲಿಟಿ ಪದವಿ ಕೋರ್ಸು ಪೂರ್ಣಗೊಳಿಸಿದ ಅಭ್ಯರ್ಥಿಯ ಕಡ್ಡಾಯ ಸೇವಾ ತರಬೇತಿ.**– (1) ಸೂಪರ್ ಸ್ಪೆಷಾಲಿಟಿ ಕೋರ್ಸುಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರತಿಯೊಬ್ಬ ಅಭ್ಯರ್ಥಿಯು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ರಾಜ್ಯದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಮತ್ತು ಸ್ಥಳ ನಿಯುಕ್ತಿಯಾದ ಹಂಚಿಕೆಯಾದ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ವರ್ಷದ ಕಡ್ಡಾಯ ಸೇವಾ ತರಬೇತಿಗೆ ಒಳಪಡತಕ್ಕದ್ದು. ಆತನಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿರಿಯ ವಿಶೇಷತಜ್ಞರ ಒಟ್ಟು ಕನಿಷ್ಠ ಸಂಬಳಕ್ಕಿಂತ ನೂರು ರೂಪಾಯಿಗಳು ಕಡಿಮೆಗೆ ಸಮನಾಗಿರುವ ನಿಯಮಿಸಬಹುದಾದ ಅಂಥ ವೃತ್ತಿವೇತನವನ್ನು ಸಂದಾಯ ಮಾಡತಕ್ಕದ್ದು:

ಪರಂತು, 3ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ 4ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ಕಡ್ಡಾಯ ಸೇವಾ ತರಬೇತಿಯನ್ನು ಮಾಡಿದ ಅಭ್ಯರ್ಥಿಗಳನ್ನು ಈ ಪ್ರಕರಣದಡಿಯಲ್ಲಿನ ಕಡ್ಡಾಯ ಸೇವಾ ತರಬೇತಿಯಿಂದ ವಿನಾಯತಿಗೊಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಡ್ಡಾಯ ಸೇವಾ ತರಬೇತಿಯನ್ನು ಹೊಂದಲು ಅಗತ್ಯಪಡಿಸಲಾಗಿದ್ದು ಆದರೆ ಅಂಥ ತರಬೇತಿಗೆ ಒಳಪಡದ ಅಂಥ ಅಭ್ಯರ್ಥಿಗಳಿಗೆ ಯಾವುದೇ ವಿಶ್ವವಿದ್ಯಾಲಯವೂ ಸೂಪರ್ ಸ್ಪೆಷಾಲಿಟಿ ಪದವಿಯನ್ನು ಪ್ರದಾನಮಾಡತಕ್ಕದ್ದಲ್ಲ.

Xxx xxx xxx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , –ಪ್ರತಿಗಳು 1000, 12ನೇ ಜೂನ್ 2017

Serial No: (7)

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

# THE KARNATAKA COMPULSORY SERVICE TRAINING BY CANDIDATES COMPLETED MEDICAL COURSES (AMENDMENT) BILL, 2017

**(L.A. Bill No. 25 of 2017)**

A Bill to amend the Karnataka Compulsory Service Training by Candidates Completed Medical Courses Act, 2012.

Whereas it is expedient to amend the Karnataka Compulsory Service Training by Candidates Completed Medical Courses Act, 2012 (Karnataka Act 26 of 2015) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.-** (1) This Act may be called the Karnataka Compulsory Service Training by Candidates Completed Medical Courses (Amendment) Act, 2017.

(2) It shall come into force at once.

**2. Amendment of the title, long title and preamble.-** In the Karnataka Compulsory Service Training by Candidates Completed Medical Courses Act, 2012 (Karnataka Act 26 of 2015) (hereinafter referred to as the principal Act),-

(i) in the title, the word "TRAINING" shall be omitted; and

(ii) in the long title and preamble, the word "training" shall be omitted.

**3. Omission of Expression.-** In the principal Act, the word "training" wherever it occurs, except in the proviso to sub-section (4) of section 3, shall be omitted.

**4. Amendment of section 3.-** In section 3 of the principal Act,-

(i) in sub-section (1), the word "trainee" shall be omitted;

(ii) sub-section (2) shall be omitted; and

(iii) in sub-section (4), in the proviso for the word "training" occurring in two places the word "service" shall be substituted.

**5. Amendment of section 4.-** In section 4 of the principal Act,-

(i) in sub-section (1), the word "trainee" shall be omitted; and

(ii) for sub-section (2), the following shall be substituted, namely:-

"(2) the provisions of sub-section (4) of section 3 shall mutatis mutandis apply to post graduates under this section:

Provided that, such candidates who undergo compulsory rural service may be given temporary registration till completion of such service to treat patients independently and prescribe medicine".

**6. Amendment of section 5.-** In section 5 of the principal Act, for sub-section (2), the following shall be substituted, namely:-

"(2) the provisions of sub-section (4) of section 3 shall mutatis mutandies apply to candidates who passes super specialty courses:

Provided that, such candidates who undergo compulsory rural service may be given temporary registration till completion of such service to treat patients independently and prescribe medicine".

**STATEMENT OF OBJECTS AND REASONS**

It is considered necessary to amend the Karnataka Compulsory Service Training by Candidates Completed Medical Courses Act, 2012 (Karnataka Act 26 of 2015) to,-

(1) omit the concept of training and to retain only the compulsory rural service subsequent to the completion of graduate or post graduate medical courses before giving permanent registration; and

(2) lift the embargo on award of degrees by the universities concerned to such candidates who have not undergone rural service.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**Dr. SHARANA PRAKASHA R.PATIL**
Minister for Medical Education

**S. Murthy**
Secretary (I/c)
Karnataka Legislative Assembly

**ANNEXURE**

**Extract from the Karnataka Compulsory Service Training by Candidates Completed Medical Courses Act, 2012 (Karnataka Act 26 of 2015)**

**xx xx xx**

**THE KARNATAKA COMPULSORY SERVICE TRAINING BY CANDIDATES COMPLETED MEDICAL COURSES ACT, 2012**

(Received the assent of the President on the Twenty ninth day of May 2015)

An Act to provide for compulsory service training by candidates completed Medical Courses before award of degrees or postgraduate degrees or diplomas.

Whereas it is expedient to provide for compulsory service training by candidates completed Medical courses and before award of degrees or postgraduate degrees or diplomas for the purposes hereinafter appearing;

Be it enacted by the Karnataka State Legislative in the Sixty-Third Year of the Republic of India, as follows:-

**1. Short title, extent and commencement.-** (1) This Act may be called the Karnataka Compulsory Service Training by Candidates completed Medical Courses Act, 2012.

**xx xx xx**

**3. Compulsory service of candidates completed medical course.-** (1) Every candidate after successful completion of MBBS degree and after completion of one year internship course shall undergo one year compulsory rural service training in Government Primary Health Centres or Government Hospitals in rural areas allotted on the basis of merit through process of counseling in such manner as may be prescribed. During such service he shall be called as Junior Resident trainee.

(2) No university shall award degree to such candidate who is required to undergo and does not undergo compulsory rural service training under sub-section (1):

Provided that in case of candidates who has been selected and pursuing any post graduate degree or diploma may undergo one year compulsory service training immediately after completion of 3 such course and such candidate may be given a

provisional MBBS certificate valid for the purpose of prosecution of Post Graduate degree.

(3) Every candidate who undergoes compulsory rural service training of one year shall be paid such a stipend equal to hundred rupees less than the minimum gross salary of General duty medical doctors in Health and Family Welfare Services.

(4) Notwithstanding anything contained in any law for the time being force every candidate who does not undergo the compulsory rural service training under sub-section (1) shall also not be eligible to permanent registration under the State under Karnataka Medical Registration Act, 1961 or under the India Medical Council Act, 1956:

Provided that such candidates may be given a temporary registration during till he undergo the said training independently treat patients and prescribe medicine during the training period.

**4. Compulsory service training of candidates completed post graduate Medical courses.-(1)** Every candidate other than the candidate who has undergone compulsory rural service training under sub-section (1) of section 3 and who has successfully completed post graduate diploma or degree shall undergo one year compulsory service training in Government hospital in urban area selected and posted on the basis of merit through process of counseling in the State in such manner as may be prescribed. During such service he shall be called as senior resident trainee. He shall be eligible for such a stipend as may be prescribed equal to hundred rupees less than minimum gross salary of specialist of Health and Family Welfare Department:

(2) No university shall award post graduate degree or diploma in the State to the candidates who does not join and undergo compulsory service training in the allotted or posted Government Hospital through process of counseling as required and prescribed under sub-section (1):

Provided that in case of a candidate who has been selected for and pursuing the super specialty course may undergo one year compulsory service training immediately after completion of such course and a provisional MBBS and P.G. degree certificate may be given to such candidates valid only for the purpose of prosecuting super specialty course:

Provided further that, such candidates may be given a temporary registration till he undergoes the said training independently treat patients and prescribe medicine during the training period.

**5. Compulsory service training of candidates completed super specialty graduate courses.-** (1) Every candidate who has successfully completed super specialty courses shall undergo one year compulsory service training in the allotted District Government Hospital selected and posted on the basis of merit through process of counseling in the State in such manner as may be prescribed. He shall be paid such a stipend as may be prescribed equal to hundred rupees less then minimum of gross salary of senior specialist of Health and Family Welfare Department:

Provided that candidates who have done compulsory service training under sub-section (1) of section 3 or sub-section (1) of section 4 are exempted from this compulsory service training under this section.

(2) No university shall award super specialty degree to such candidates who are required to undergo but does not undergo compulsory service training posted under sub-section (1).

xx xx xx

Government Press, Vikasa Soudha Unit, Bengaluru 13th June, 2017 P7, W.D., Copies 1000